ದಿನಾಂಕಃ 04-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ರವರ ಪರ ಶ್ರೀ ಸಿ ಎಲ್ ಎಂ ವಕೀಲರಿಂದ,

1) ನಾನು ಮೂರನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಆದರ ಸಹಿ ಮಾಡುತ್ತೇನೆ. ವಾದಿಗಳು 5 ಎಕರೆ 24 ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳು ಯಾರ ಹೆಸರಿನಲ್ಲಿ ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸಿದ್ದೇಗೌಡರ ಮಕ್ಕಳು ನನಗೆ ಗೊತ್ತಿರುತ್ತಾರೆ. ಸಿದ್ದೇಗೌಡ ರವರ ಜೊತೆಯಲ್ಲಿ ಮೂರು ಜನ ಸಹೋದರರು ಇರುತ್ತಾರೆ.

2) ಸಿದ್ದೇಗೌಡ ರವರ ಕುಟುಂಬಟಕ್ಕೆ ಸರ್ವೆ ನಂ. 290 ರಲ್ಲಿ ಆಸ್ತಿ ಇದ್ದು, ಸದರಿ ಆಸ್ತಿಯ ದಕ್ಷಿಣ ಭಾಗಕ್ಕೆ ನನಗೆ ಸೇರಿದ ಸರ್ವೆ ನಂ. 27 ಆಸ್ತಿ ಇರುತ್ತದೆ ಎಂದರೆ ಸರಿ. ನನಗೆ ಸೇರಿದ ಆಸ್ತಿಯನ್ನು ನಾನು ಪ್ರೇಮಕುಮಾರ ಎಂಬುವವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಪ್ರೇಮಕುಮಾರ ಎಂಬುವವರು ಸದರಿ ಆಸ್ತಿಯನ್ನು ಉಮೇಶ ರವರಿಗೆ ಮಾರಾಟ ಮಾಡಿದ್ದು, ಸದರಿ ಉಮೇಶ ರವರಿಂದ ಕೃಷ್ಣೇಗೌಡರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಕೃಷ್ಣೇಗೌಡರು ಖರೀದಿ ಮಾಡಿದ ಜಮೀನಿನ ಪೂರ್ವ ಭಾಗಕ್ಕೆ ಅಶ್ವಿನಿ ರವರ ಜಮೀನು ಇರುತ್ತದೆ ಎಂದರೆ ಸರಿ. ಅಶ್ವಿನಿ ರವರು ನನ್ನ ಚಿಕ್ಕಪ್ಪ ಸಿದ್ದರಾಮೇಗೌಡ ರವರಿದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನನಗೂ ಮತ್ತು ಸಿದ್ದೇಗೌಡರ ಸಹೋದರರ ನಡುವೆ ವೈಶಮ್ಯ ಇರುವ ಕಾರಣ ನಾನು ದಾವಾ ಸ್ವತ್ತಿನಲ್ಲಿ ಸಿದ್ದೇಗೌಡ ಮತ್ತು ಸಹೋದರರು ಸ್ವಾಧೀನ ಇಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ